**ದಿನಾಂಕ:06-01-2022 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**: ಪಾಟೀ ಸವಾಲುಃ ವಾದಿ ಪರ ಶ್ರೀ.ಎಂ.ಎಸ್.ಹೆಚ್ ವಕೀಲರಿಂದ :**

ವಾದಿ ನನಗೆ ಸಂಬಂಧಿಕನಾಗಬೇಕು. ಪ್ರತಿವಾದಿಯರು ಸಹ ನನಗೆ ಸಂಬಂಧಿಕರು. ವಾದಿ ನನ್ನ ಹೆಂಡತಿಯ ಕಡೆಯಿಂದ ಅಳಿಯನಾಗಬೇಕು. ನಾನು ವಾದಿಯ ಸ್ವಂತ ತಂಗಿ ಖುರ್ಶಿದಾರವರ ಗಂಡ ಎಂದರೆ ಸರಿ. ನನಗೆ ವಾದಿ ಮತ್ತು ಪ್ರತಿವಾದಿಯರಿಗೆ ಸಂಬಂಧಿಸಿದ ಆಸ್ತಿಯ ಸರ್ವೇ ನಂಬರ ಗೊತ್ತಿಲ್ಲ. ನಾನು ವಾದಿಯ ತಂಗಿಯನ್ನು ಮದುವೆಯಾಗಿ 50 ವರ್ಷವಾಯಿತು. ಈಗ ನನಗೆ 66 ವರ್ಷ ವಯಸ್ಸು. ನನಗೆ ಮದುವೆಯಾಗುವಾಗ 22 ವರ್ಷ ವಯಸ್ಸಾಗಿತ್ತು. ಮದುವೆಯಾಗುವ ಪೂರ್ವದಲ್ಲಿ ನಾನು ವಾದಿಯ ಕುಟುಂಬಕ್ಕೆ ದೂರದ

ಸಂಬಂಧಿಯಾಗಿದ್ದೆ. ನನ್ನ ಮತ್ತು ಖುರ್ಶಿದಾರವರ ಮದುವೆಗೆ ವಾದಿ ಮತ್ತು ಅವರ ಕುಟುಂಬದವರ ಒಪ್ಪಿಗೆ ಇರಲಿಲ್ಲ ಎಂದರೆ ವಾದಿ ಊರಲ್ಲಿ ಇರಲಿಲ್ಲ, ವಾದಿಯ ತಂದೆ ಮತ್ತು ನನ್ನ ತಂದೆ ಒಪ್ಪಿ ಮದುವೆಯಾಗಿದ್ದೇವೆ. ಇವತ್ತಿಗೂ ನನ್ನ ಪತ್ನಿ ವಾದಿಯ ಮನೆಗೆ ಹೋಗಿ ಬಂದು ಮಾಡುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮದುವೆಯಾದಾಗಿನಿಂದ ಇಲ್ಲಿಯವರೆಗೂ ನಮಗೂ ವಾದಿಗೂ ಆಗಿ ಬರುವುದಿಲ್ಲ ಎಂದರೆ ಸರಿ.

ವಾದಿ ಮತ್ತು ಪ್ರತಿವಾದಿಯರ ಕುಟುಂಬದಲ್ಲಿ ಆಸ್ತಿಗೆ ಸಂಬಂಧಪಟ್ಟಂತೆ ಏನು ವ್ಯವಹಾರ ಆಗಿದೆ ಎಂದು ನನಗೆ ಮಾಹಿತಿ ಇಲ್ಲ. ನನ್ನನ್ನು ಅವರ ಕುಟುಂಬದ ಆಸ್ತಿಯ ಪಂಚಾಯತಿಗೆಗೆ ಕರೆದು ಸಹಿ ಮಾಡಿಸಿಕೊಂಡಿಲ್ಲ. ವಾದಿ ಮತ್ತು ಪ್ರತಿವಾದಿಯರ ಕುಟುಂಬದಲ್ಲಿ 1984 ರಲ್ಲಿ ವಾಟ್ನಿಯಾಗಿದೆ. 1984 ರಲ್ಲಿ ಆಗಿದೆ ಎನ್ನುವ ವಾಟ್ನಿ ಪತ್ರಕ್ಕೆ ನಾನು ಸಹಿ ಹಾಕಿಲ್ಲ. ಆ ಪತ್ರವನ್ನು ನಾನು ನೋಡಿಲ್ಲ. ಇನ್ನೊಂದು ವಾಟ್ನಿ ಪತ್ರ ಆಗಿದೆ, ಯಾವಾಗ ಎಂದು ನೆನಪಿಲ್ಲ. ಸಾಕ್ಷಿ ಮುಂದುವರೆದು 1983 ರಲ್ಲಿ ವಾಟ್ನಿಯಾಗಿದೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇಂತಹ ತಾರೀಖಿನಂದು ವಾಟ್ನಿಯಾಗಿದೆ ಎಂದು ನಾನೇ ಮಾಹಿತಿ ಕೊಟ್ಟು ಬರೆಸಿದ್ದೇನೆ. ಈ ಆ ತಾರೀಖು ಹೇಳಲಾಗುವುದಿಲ್ಲ. ದಾವಾ ಆಸ್ತಿಯ ಉತಾರನ್ನು ಹಿಸ್ಸೆಯಾಗುವಾಗ ಸುಮಾರು 15-20 ವರ್ಷಗಳ ಹಿಂದೆ ನೋಡಿದ್ದೇನೆ. ಈಗ ಸಾಕ್ಷಿ ಹೇಳಲು ಬರುವಾಗ ಉತಾರು ನೋಡಿಲ್ಲ. ಈ ದಾವೆಯನ್ನು ವಾದಿ 1 ನೇ ಪ್ರತಿವಾದಿ ವಿರುದ್ಧ ದಾಖಲಿಸಿದ್ದಾರೆ. ಬೇರೆಯವರ ವಿರುದ್ಧವು ದಾವೆ ಹಾಕಿದ್ದಾರೆ.

ದಾವಾ ಆಸ್ತಿ ಮೂಲತಃ ಬರಹ್ಮಣರಿಗೆ ಸೇರಿದ್ದು. ಸದರಿ ಆಸ್ತಿಯು ವಾದಿ ಪ್ರತಿವಾದಿಯರ ಕುಟುಂಬಕ್ಕೆ ಹೇಗೆ ಬಂತು ಎಂದರೆ ಭೂ-ನ್ಯಾಯ ಮಂಡಳಿಯಿಂದ ಬಂತು. ಇವತ್ತಿಗೂ ವಾದಿ, ಪ್ರತಿವಾದಿಯರು ದಾವಾ ಆಸ್ತಿಯನ್ನು ಸಾಮೂಹಿಕವಾಗಿಯೇ ವಹಿವಾಟು ಮಾಡುತ್ತಾರೆ ಎಂದರೆ ಅವರವರ ಹಿಸ್ಸೆಯನ್ನು ಅವರವರೇ ಮಾಡುತ್ತಾರೆ. ವಾಟ್ನಿಯಾಗಿದೆ ಎನ್ನುವಾಗ ನನ್ನ ಪತ್ನಿಗೆ ಹಿಸ್ಸೆ ಕೊಟ್ಟಿಲ್ಲ. ವಾದಿಯ ತಂದೆ ಮೃತಪಟ್ಟು ಸುಮಾರು 20-25 ವರ್ಷ ಆಯಿತು. ಎಷ್ಟನೇ ಇಸ್ವಿ ಎಂದು ಗೊತ್ತಿಲ್ಲ. ನನ್ನ ಮದುವೆಯಾಗಿ 5-6 ವರ್ಷದ ನಂತರ ವಾದಿಯ ತಂದೆ ತೀರಿಕೊಂಡಿದ್ದಾರೆ. ನನಗೂ ವಾದಿಗೂ ಮೊದಲಿನಿಂದಲೂ ಆಗದೇ ಇರುವ ಕಾರಣ 1 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪತ್ನಿ ವಾದಿಯ ಬಳಿ ಆಸ್ತಿ ಕೊಡು ಎಂದು ಕೇಳಿದಾಗ ವಾದಿ ಕೊಡವುದಿಲ್ಲ ಎಂದ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರ ಮಧ್ಯೆ ದಾವಾ ಆಸಿತಗೆ

ಸಂಬಂಧಿಸಿದಂತೆ ಇಲ್ಲಿಯವರೆಗೆ ಯಾವುದೇ ಹಿಸ್ಸೆ ಆಗಿಲ್ಲ ಎಂದರೆ ಸರಿಯಲ್ಲ. ತಾಜುಸಾಬ್ ರವರಿಗೆ ನಾಲ್ಕು ಜನ ಗಂಡು, ಐದು ಹೆಣ್ಣು ಮಕ್ಕಳು. ಆ ವಾಟ್ನಿಯಲ್ಲಿ ಅವರಿಗೆ ಹಿಸ್ಸೆ ಕೊಟ್ಟಿಲ್ಲ. ನನಗೆ ಏನು ಗೊತ್ತಿಲ್ಲದೇ ಇದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

: **ಮರುವಿಚಾರಣೆ** : **ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ